1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 131/2022

ದಿನಾಂಕ ೦ಃ 29.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ: 1 ಪಿ. ಡಬ್ಲ್ಯೂ:1

| | |
|---|---|
| ಸಾಕ್ಷಿದಾರರ ಹೆಸರು | ಕೆಂಚಯ್ಯ |
| ತಂದೆಯ ಹೆಸರು | ಚನ್ನಯ್ಯ |
| ವಯಸ್ಸು | 45 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ದಬ್ಬಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ.2 ರವರು ನನ್ನ ಅಣ್ಣ. ಚಾಸಾ.3 ರವರು, ನನ್ನ ಅಣ್ಣನ ಹೆಂಡತಿ. ಚಾಸಾ.4 ರವರು ನನ್ನ ಸಂಬಂಧಿಕರು.
2. 1 ರಿಂದ 4 ನೇ ಆರೋಪಿತರು ಗೊತ್ತು, ಅವರು ನಮ್ಮ ಊರಿನವರು. ನಾನು ಈಗ ನೋಾಡುತ್ತಿರುವ ದೂರಿನಲ್ಲಿ ಇರುವ ಸಹಿ ನನ್ನದೇ. ಸಾಕ್ಷಿಯು, ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.
3. ನಾನು, ಎನ್ ಎಸ್ ನಾಗರಾಜು ಎನ್ನುವವರ ತೋಟಕ್ಕೆ ಕೆಲಸಕ್ಕೆ ಹೋಗುತ್ತಿದ್ದೆ, ಅಲ್ಲಿ ಶಾಂತಮ್ಮ ಕೂಡ ಕೆಲಸಕ್ಕೆ ಬರುತ್ತಿದ್ದರು. ಚಾಸಾ.2 ರವರು ಕೂಡ ನಾಗರಾಜು ರವರ ತೋಟಕ್ಕೆ ಕೆಲಸಕ್ಕೆ ಬರುತ್ತಿದ್ದರು. ನಾನು ಈಗ ಆ ಕೆಲಸಕ್ಕೆ ಹೋಗುತ್ತಿಲ್ಲ, ಆದರೆ ನನ್ನ ಅಣ್ಣ ಹೋಗುತ್ತಿದ್ದಾನೆ.
4. ನನ್ನ ಅಣ್ಣ ನಿಂಗಯ್ಯನಿಗೆ 1 ನೇ ಆರೋಪಿ ಮತ್ತು ಇನ್ನೊಬ್ಬರು ಯಾರೋ ಗೊತ್ತಿಲ್ಲ, ಅವರು ಮುಖಕ್ಕೆ ಕೊಚ್ಚಿದ್ದಾರೆ. ಈ ರೀತಿ ಕೊಚ್ಚಿ, 6 ವರುಷಗಳ ಮೇಲೆ ಆಗಿದೆ.
5. ಆ ದಿನ ನನ್ನ ಅಣ್ಣ,ನಾಗರಾಜುರವರ ತೋಟಕ್ಕೆ ಹಾಲು ಕರೆಯಲು ಬೆಳಗ್ಗೆ 4.30 ಕ್ಕೆ ಹೋಗಿದ್ದನು. ನಾನು ಬೆಳಗ್ಗೆ 5.00 ಗಂಟೆಗೆ ಹೋಗಿದ್ದೇನೆ. ನಾನು ತೋಟಕ್ಕೆ ಹೋಗುತ್ತಿದ್ದಾಗ, ದಬ್ಬಹಳ್ಳಿಯ ಮಹೇಶನ ಪೆಟ್ಟಿಗೆ ಅಂಗಡಿಯ ಬಳಿ ನನ್ನ ಅಣ್ಣ ಚಾಸಾ. 2 ರವರು ಮುಖಕ್ಕೆ ಟವಲ್ ಸುತ್ತಿಕೊಂಡು ಗಾಡಿಯಲ್ಲಿ ಬರುತ್ತಿದ್ದರು. ನನ್ನನ್ನು ನೋಡಿ ಗಾಡಿ

ನಿಲ್ಲಿಸಿದ್ದರು. ನನ್ನ ಅಣ್ಣನ ಮುಖ, ಮೂಗು, ಕಿವಿಗಳಿಗೆ ಕೊಚ್ಚಿದ್ದರು. ನನ್ನ ಅಣ್ಣನನ್ನು ಕೇಳಿದಾಗ, ಆನಂದ ಬಂದು ಮಚ್ಚಿನಲ್ಲಿ ತನಗೆ ಕೊಚ್ಚಿದನು ಎಂದು ಹೇಳಿದನು. ನಾಗರಾಜು ರವರ ತೋಟದ ಬಳಿ ನನ್ನ ಅಣ್ಣನಿಗೆ 1 ನೇ ಆರೋಪಿಯು ಹಲ್ಲೆ ಮಾಡಿದ್ದು ಎಂದು ಹೇಳಿದನು.

6. ನನ್ನ ಅಣ್ಣನಿಗೂ ಮತ್ತು 2 ನೇ ಆರೋಪಿಗೂ ಅಕ್ರಮ ಸಂಬಂಧ ಇತ್ತು ಎಂದು ಆನಂದನು ನನ್ನ ಅಣ್ಣನಿಗೆ ಕೊಚ್ಚಿದ್ದನು. ನನ್ನ ಪ್ರಕಾರ ನನ್ನ ಅಣ್ಣನಿಗೆ 2 ನೇ ಆರೋಪಿಯ ಜೊತೆ 6 ರಿಂದ 7 ವರುಷಗಳಿಂದ ಅಕ್ರಮ ಸಂಬಂಧ ಇತ್ತು, ಈ ವಿಚಾರವಾಗಿ 2 ಸಲ ಊರಿನಲ್ಲಿ ನ್ಯಾಯ ಪಂಚಾಯಿತಿ ಆಗಿತ್ತು. ನಂತರದಲ್ಲಿ ಶಾಂತಮ್ಮನಿಗೂ ಮತ್ತು 1 ನೇ ಆರೋಪಿಗೂ ಕೂಡ ಅಕ್ರಮ ಸಂಬಂಧ ಇದ್ದ ಕಾರಣ, 1 ನೇ ಆರೋಪಿ ನನ್ನ ಅಣ್ಣನಿಗೆ ಕೊಚ್ಚಿದ್ದಾನೆ. ಆನಂದನಿಗೂ, ಶಾಂತಮ್ಮನಿಗೂ ಅಕ್ರಮ ಸಂಬಂಧ ಇರುವ ವಿಚಾರ ನಮ್ಮ ಮನೆಯವರಿಗೂ ಗೊತ್ತಿತ್ತು. ನಮ್ಮ ಅಣ್ಣನಿಗೆ ಕೂಡ ಗೊತ್ತಿತ್ತು. ನಮ್ಮ ಅಣ್ಣ ಮತ್ತು ಶಾಂತಮ್ಮನಿಗೆ ಇರುವ ಅಕ್ರಮ ಸಂಬಂಧ ಇದ್ದ ಬಗ್ಗೆ ನಮ್ಮ ಕುಟುಂದಬದವರಿಗೂ ಗೊತ್ತಿತ್ತು. ಈ ಬಗ್ಗೆ ನಮ್ಮ ಅಣ್ಣನಿಗೆ ನಾವು ಕೂಡ ಬುದ್ದಿ ಹೇಳಿದ್ದೇವೆ, ಆದರೆ ಅವನು ಕೇಳುತ್ತಿರಲಿಲ್ಲ.

7. ಜಯಮ್ಮ, ಶಾಂತಮ್ಮ ನವರ ತಾಯಿ. ಅವರು ಶಾಂತಮ್ಮನ ಜೊತೆ ದಬ್ಬಹಳ್ಳಿಯೇ ವಾಸವಾಗಿದ್ದರು. ಜಯಮ್ಮನಿಗೂ ಈ ವಿಚಾರ ಗೊತ್ತಿತ್ತು. ನಮ್ಮ ಮನೆಯಿಂದ ಶಾಂತಮ್ಮನ ಮನೆ ಅರ್ಧ ಕಿಮೀ ದೂರ ಇತ್ತು. ನನ್ನ ಅಣ್ಣ ಮತ್ತು ಶಾಂತಮ್ಮ, ತೋಟದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು, ಆ ಸಮಯದಲ್ಲಿ ಅವರಿಗೆ ಅಕ್ರಮ ಸಂಬಂಧ ಇತ್ತು. ಅಲ್ಲದೇ ನನ್ನ ಅಣ್ಣ, ಶಾಂತಮ್ಮನ ಮನೆಗೆ ಕೂಡ ಹೋಗುತ್ತಿದ್ದರು.

8. ನಮ್ಮ ಅಣ್ಣನಿಗೆ 1 ನೇ ಆರೋಪಿಯು ಹಲ್ಲೆ ಮಾಡಿದ್ದು ತಿಳಿದ ನಂತರ ನಾನು ಆಂಬುಲೆನ್ಸ್ ಫೋನ್ ಮಾಡಿದೆ, ನಂತರ ಅವನನ್ನು ಅಂಬುಲೆನ್ಸ್ನಲ್ಲಿ ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ನಾನು ಮತ್ತು ಚಾಸಾ.3 ರವರು ಕರೆದುಕೊಂಡು ಹೋದೆವು. ಮಳವಳ್ಳಿಯಿಂದ ಮಂಡ್ಯಕ್ಕೆ ಶಿಫಾರಸ್ಸು ಮಾಡಿದಾಗ ಅದೇ ದಿನ ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಮಂಡ್ಯ ಸರ್ಕಾರಿ ಆಸ್ಪತ್ರೆಯಲ್ಲಿ ನಮ್ಮ ಅಣ್ಣ 15 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದರು.

9. ನಂತರ ಘಟನೆಯ ಬಗ್ಗೆ ಅದೇ ದಿನ ನಾನೇ ದೂರು ನೀಡಿದ್ದೇನೆ. ಅದೇ ದಿನ ಪೊಲೀಸರು ಮಧ್ಯಾಹ್ನ 12.00 ಗಂಟೆಯ ನಂತರ ತೋಟದ ಬಳಿ ನಮ್ಮ ಅಣ್ಣನಿಗೆ 1 ನೇ ಆರೋಪಿ ಕೊಚ್ಚಿದ ಜಾಗ ಮತ್ತು ದಬ್ಬಹಳ್ಳಿಯ ಮಹೇಶನ ಪೆಟ್ಟಿಗೆ ಅಂಗಡಿ ಬಳಿ ಬಂದಿದ್ದರು. ಮೊದಲು ತೋಟದ ಬಳಿ ಪೊಲೀಸರು ಬಂದರು. ಆ ಸಮಯದಲ್ಲಿ, ಸ್ಥಳದಲ್ಲಿ ನಾನು ಮತ್ತು ಕರಿಯಪ್ಪ

ಇದ್ದೆವು. ಪೊಲೀಸರಿಗೆ ಜಾಗವನ್ನು ನಾನೇ ತೋರಿಸಿದೆ. ಪೊಲೀಸರು, ತೋಟದ ಬಳಿ ಮಹಜರ್ ಮಾಡಿದರು.

10. ಸಾಕ್ಷಿಯು 29.05.2018 ರಂದು ನಾಗರಾಜು ರವರ ತೋಟದ ಬಳಿ ಮಾಡಿದ್ದು ಎಂದು ಹೇಳಲಾದ ಮಹಜರಿನಲ್ಲಿ ತನ್ನ ಹೆಸರು ಇದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಗುರುತಿಸಿದ ಸದರಿ ಮಹಜರನ್ನು ರುಜುತ್ವಕ್ಕೆ ಒಳಪಟ್ಟು ನಿಪಿ.2 ಎಂದು ಗುರುತಿಸಲಾಯಿತು. ಅಲ್ಲಿಂದ ಪೊಲೀಸರು ಮಹೇಶನ ಅಂಗಡಿಯ ಬಳಿ ಬಂದು ಅಲ್ಲಿ ಕೂಡ ಮಹಜರ್ ಮಾಡಿದರು. ಅಲ್ಲಿ ನೆಲದಿಂದ ಮಣ್ಣು ಮತ್ತು ನನ್ನ ಅಣ್ಣನ ಟವಲನ್ನು ಸಂಗ್ರಹಿಸಿದರು. ಅಲ್ಲಿ ನನ್ನ ಅಣ್ಣ ಗಾಡಿ ಕೂಡ ಬಿದ್ದಿತ್ತು, ಅದನ್ನು ಕೂಡ ಪೊಲೀಸರು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋದರು. ಸಾಕ್ಷಿಯು 29.05.2018 ರಂದು ಮಹೇಶನ ಅಂಗಡಿಯ ಬಳಿ ಮಾಡಿದ್ದು ಎಂದು ಹೇಳಲಾದ ಮಹಜರಿನಲ್ಲಿ ತನ್ನ ಹೆಸರು ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ರುಜುತ್ವಕ್ಕೆ ಒಳಪಟ್ಟು ನಿಪಿ.3 ಎಂದು ಗುರುತಿಸಲಾಯಿತು.

11. ಪೊಲೀಸರು ಮಹೇಶನ ಅಂಗಡಿಯ ಅಮಾನತ್ತು ಪಡಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಬಿಳಿಯ ಬಟ್ಟೆಯ ಚೀಲದಲ್ಲಿ ಸುತ್ತಿರುವ ಒಂದು ಪ್ಲಾಸ್ಟಿಕ್ ಡಬ್ಬದ ಒಳಗೆ ಇರುವ ರಕ್ತ ಮಿಶ್ರಿತ ಮಣ್ಣನ್ನು ತೋರಿಸಲಾಗಿ, ಅವನ್ನೆಲ್ಲ ಒಟ್ಟಾಗಿ ಮುಮಾ.1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಬಟ್ಟೆಯ ಚೀಲದಲ್ಲಿ ಸುತ್ತಿರುವ ಒಂದು ಪ್ಲಾಸ್ಟಿಕ್ ಡಬ್ಬದ ಒಳಗೆ ಇರುವ ಸಾದಾಮಣ್ಣನ್ನು ತೋರಿಸಲಾಗಿ, ಅವನ್ನೆಲ್ಲ ಒಟ್ಟಾಗಿ ಮುಮಾ.2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಬಟ್ಟೆಯ ಚೀಲದಲ್ಲಿ ಸುತ್ತಿರುವ ಕಾಫಿ ಬಣ್ಣದ ಮಿಶ್ರಿತ ಒಂದು ಟವಲ್ ತೋರಿಸಲಾಗಿ, ಸಾಕ್ಷಿಯು ಗುರುತಿಸಿದ ಕಾರಣ ಅದನ್ನು ಮುಮಾ.3 ಎಂದು ಗುರುತಿಸಲಾಯಿತು. ನನ್ನ ಅಣ್ಣನ ಗಾಡಿ ನಂಃ 3148. ಆ ಗಾಡಿಯನ್ನು ನಾನು ನ್ಯಾಯಾಲಯದ ಆದೇಶದಂತೆ ಬಿಡಿಸಿಕೊಂಡಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ.

12. ನನಗೆ 1 ನೇ ಆರೋಪಿ ಆನಂದ ಗೊತ್ತು, ಅವರು ಇಂದು ನ್ಯಾಯಾಲಯದ ಮುಂದೆ ಇದ್ದಾರೆ. 2 ಮತ್ತು 3 ನೇ ಆರೋಪಿಗಳು ಕೂಡ ಗೊತ್ತು, ಅವರನ್ನು ನೋಡಿದರೆ ಗುರುತಿಸುತ್ತೇನೆ. 2 ಮತ್ತು 3 ನೇ ಆರೋಪಿತರು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, 2 ಮತ್ತು 3 ನೇ ಆರೋಪಿತರಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ಅವರ ಪರ ವಕೀಲರು ಹೇಳಿರುತ್ತಾರೆ. ಆದ್ದರಿಂದ ಸಾಕ್ಷಿಯು 2 ಮತ್ತು 3 ನೇ ಆರೋಪಿಗಳನ್ನು ಗುರುತಿಸಿದ್ದಾರೆ ಎಂದು ಪರಿಗಣಿಸಲಾಯಿತು.

13. ದೂರು ನೀಡಿದ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿದ್ದಾರೆ.

**<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ ಃ</u>**

1 ನೇ ಆರೋಪಿ ಪರ ವಕೀಲರು ಗೈರು ಹಾಜರು, 1 ನೇ ಆರೋಪಿಯನ್ನು ಪಾಟೀ ಸವಾಲು ಮಾಡಲು ಹೇಳಿದಾಗ, ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ 1 ನೇ ಆರೋಪಿಯ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

2 ಮತ್ತು 3 ನೇ ಆರೋಪಿತರ ಪರ ವಕೀಲರು, ಪಾಟೀ ಸವಾಲು ಮಾಡಲು ಸಮಯ ಕೇಳಿದ್ದು, ಸಕಾರಣಗಳು ಇಲ್ಲದೇ ಇದ್ದ ಕಾರಣ, ಕಾಲವಾಕಾಶ ನೀಡಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಯಾದವ ಕೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.